# ಶ್ರೀಮಾತೆಯವರ ಪುಣ್ಯಸ್ಮೃತಿ

ಮೂಲ ಬಂಗಾಳಿ : **ವೀಣಾಪಾಣಿ ಘೋಷ್** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೨

ಇನ್ನೂ ಕೆಲವು ದಿನಗಳ ನಂತರ ಎಂಬತ್ತನೇ ವಯಸ್ಸಿನ ತಾಯಿ, ತಂದೆಯರನ್ನು ತ್ಯಜಿಸಿ ನನ್ನ ದೊಡ್ಡ ಅಣ್ಣ ತೀರಿಕೊಂಡರು. ಆಗ ಅತೀವ ಶೋಕಗ್ರಸ್ತರಾಗಿದ್ದ ನನ್ನ ತಾಯಿಯನ್ನು ಕರೆದುಕೊಂಡು ನಾನು ಶರತ್ ಮಹಾರಾಜರ ಬಳಿಗೆ ಹೋಗಿ ಬರಲು ಆರಂಭಿಸಿದೆ. ಆಗ 'ಉದ್ಬೋಧನ'ದಲ್ಲಿ ಶ್ರೀಮಾತೆಯವರಿಲ್ಲದೆ ಎಲ್ಲವೂ ಶೂನ್ಯವಾಗಿಬಿಟ್ಟಿತ್ತು. ನನ್ನ ಜೀವ ಹಾಹಾಕಾರ ಮಾಡುತ್ತಿತ್ತು. ಮನಸ್ಸಿನಲ್ಲೇ ನಾನು ಹೇಳಿಕೊಳ್ಳುತ್ತಿದ್ದೆ: 'ಅಮ್ಮಾ, ಇದೋ ನೋಡಿ, ಅತ್ತೆಯವರನ್ನು ಬಿಟ್ಟು ಬಂದುಬಿಟ್ಟಿದ್ದೇನೆ. ಆಗ ಯಾಕೆ ನೀವು, ನನ್ನನ್ನು ಹೀಗೆ ಕರೆಸಿಕೊಳ್ಳಲಿಲ್ಲ? ಮತ್ತೆ ನಿಮ್ಮನ್ನು ನೋಡಲಾಗಲಿಲ್ಲ.' ಪೂಜ್ಯರಾದ ಗೋಲಾಪ್-ಮಾ, ಯೋಗಿನ್-ಮಾ ಎಷ್ಟೋ ಸಾಂತ್ವನ ನೀಡುತ್ತಿದ್ದರು, ನನ್ನನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಿದ್ದರು. ಆದರೆ ಬಹಳ ದಿನಗಳವರೆಗೆ ನನ್ನ ಒಳಗಿನ ದುಃಖ ಮಾಯವಾಗಲಿಲ್ಲ. ಕ್ರಮೇಣ ಅದು ಮಾಯವಾಯಿತು.

ಆಗ ಪೂಜ್ಯ ಶರತ್ ಮಹಾರಾಜರ ಬಳಿ ನನ್ನ ಇಬ್ಬರು ಹೆಣ್ಣು ಮಕ್ಕಳಿಗೆ ದೀಕ್ಷೆ ನೀಡಬೇಕೆಂದು ಪ್ರಾರ್ಥಿಸಿಕೊಂಡೆ. ಮಹಾರಾಜರು ಆನಂದದಿಂದ ಒಪ್ಪಿಗೆ ನೀಡಿದರು. ಚಿಕ್ಕವಳು ಇನ್ನೂ ಎಳೆಯ ಹುಡುಗಿ, ಆದರೂ ಅವರು ದೀಕ್ಷೆ ನೀಡಿದರು. ಒಂದು ದಿನ ನಾನು ಅವರ ಬಳಿಗೆ ಹೋಗಿ ಹೇಳಿದೆ: ''ಮಹಾರಾಜ್, ಅವಳು ನನ್ನ ಮಾತು ಕೇಳುವುದೇ ಇಲ್ಲ.'' ಆಗ ಅವರೆಂದರು, ''ಅವಳ ಮಹಾರಾಜರು (ಅಂದರೆ ತಾನು) ಚಿಕ್ಕಂದಿನಲ್ಲಿ ಎಷ್ಟೊಂದು ತುಂಟರಾಗಿದ್ದರು ಅಂತ ನಿಮಗೆ ಗೊತ್ತಿಲ್ಲವಲ್ಲ, ಅಮ್ಮಾ!'' ಬಳಿಕ ಅವಳಿಗೆ, ''ನೋಡಮ್ಮಾ, ತುಂಟತನ ಮಾಡುತ್ತಿದ್ದೀಯಲ್ಲ, ನಿನ್ನನ್ನು ಬೆಕ್ಕಿನ ಮರಿಯ ಹಾಗೆ ಮಂಚದ ಕಾಲಿಗೆ ಕಟ್ಟಿಹಾಕಿಬಿಡುತ್ತೇನೆ! ನಿನಗೆ ಶಾಂತಿ ಕೊಟ್ಟಿದ್ದೇನೆ – ಬಾ'' ಎಂದು ಹೇಳಿ, ಒಂದು ದೊಡ್ಡ ಅಗರಬತ್ತಿಯನ್ನು ಹೊತ್ತಿಸಿ, ಅವಳ ಕೈಗೆ ಕೊಡುತ್ತಿದ್ದರು. 'ಉದ್ಬೋಧನ'ದಲ್ಲಿ ಆಗ ಅವಳಿಗೆ 'ಮಹಾರಾಜರ ಬೆಕ್ಕಿನ ಮರಿ' ಎಂದೇ ಕರೆಯುತ್ತಿದ್ದರು. ಅಷ್ಟೊಂದು ಸಣ್ಣ ವಯಸ್ಸಿನಲ್ಲಿ ಅವಳಿಗೆ ಎಷ್ಟು ಪ್ರೀತಿ ಲಭಿಸಿತ್ತೆಂದರೆ, ಈಗ ಅವಳಿಗೆ ಅದೆಲ್ಲ ಸರಿಯಾಗಿ ನೆನಪಿಗೆ ಬರುತ್ತಲೇ ಇಲ್ಲ.

ಹೀಗೆಯೇ, ತಾಯಿಯನ್ನು ಕಳೆದುಕೊಂಡ ಮಕ್ಕಳ ದುಃಖವನ್ನು ತಮ್ಮ ವಿಶಾಲ ಹೃದಯದಲ್ಲಿ ಧರಿಸಿಕೊಂಡು, ಶರತ್ ಮಹಾರಾಜರು ಎಲ್ಲರಿಗೂ ಸಾಂತ್ವನ ನೀಡುತ್ತಿದ್ದರು. ಅವರ



ಪ್ರೀತಿಯಲ್ಲಿ ನಮಗೆ ಶ್ರೀಮಾತೆಯವರ ಪ್ರೀತಿಯ ಸ್ವಾದವನ್ನೇ ನಾವು ಪಡೆಯುತ್ತಿರುವ ಹಾಗೆ ಅನ್ನಿಸುತ್ತಿತ್ತು. ಶ್ರೀಮಾತೆಯವರ ಭಾವವನ್ನು ಧರಿಸಿಕೊಂಡೇ ಅವರು ಎಲ್ಲರ ಮನಸ್ಸನ್ನು ತುಂಬಿಬಿಡುತ್ತಿದ್ದರು.

ನನ್ನ ಹೆಣ್ಣುಮಕ್ಕಳು ಬಾಲ್ಯಕಾಲದಲ್ಲಿ ದೀಕ್ಷೆಯನ್ನು ಪಡೆದ ನಂತರ ಗುರುವಿನ ಸಂಗಲಾಭವನ್ನು ಪಡೆಯಲಿಲ್ಲ ಎಂದು ಹೇಳಿದಾಗ, ಒಬ್ಬರು ಹಿರಿಯ ಸಂನ್ಯಾಸಿಗಳು ಹೇಳಿದ್ದರು: ''ಯಾರು ಸಿದ್ಧ ಗುರುಗಳೋ ಅವರ ವಿಷಯವಾಗಿ ಇದೆಲ್ಲ ಬೇಕಾಗುವುದಿಲ್ಲ. ಅವರು ಒಂದು ಬಾರಿ ತಮ್ಮ ದೃಷ್ಟಿಯನ್ನು ಬೀರಿದರೂ ಸಾಕಾಗುವುದು.'' ಇದನ್ನು ಕೇಳಿದಾಗ ನನ್ನ ಮನಸ್ಸನ್ನು ಆವರಿಸಿದ್ದ ಮಂಜಿನ ತೆರೆ ಸರಿದುಹೋಯಿತು. ನನ್ನ ಕುರಿತು ನನಗನ್ನಿಸಿತು – ಹೌದಲ್ಲ ; ಇನ್ನು ದುಃಖಿಸಬೇಕಾದ ಅಗತ್ಯವೇನಿದೆ? ಶ್ರೀಮಾತೆಯವರ ದರ್ಶನವನ್ನು ಒಂದು ಬಾರಿ ಪಡೆದರೂ ಸಾಕಲ್ಲ!

ಶ್ರೀಮಾತೆಯವರು ಆಂತರಿಕ ಅನುಭೂತಿಯ ಸಂಪತ್ತು. ರೋಗ, ಶೋಕವೇ ಮೊದಲಾದ ಸಾಂಸಾರಿಕ ಜಂಜಾಟಗಳ ಮಧ್ಯೆ ಯಾವಾಗಲೂ ಶ್ರೀಮಾತೆಯವರ ಸ್ಪರ್ಶದ ಅನುಭವ ವನ್ನು ಪಡೆಯುತ್ತೇನೆ. ಕರುಣಾಮಯಿ ಶ್ರೀಮಾತೆಯವರು ನನ್ನನ್ನು ತಮ್ಮ ಪ್ರೀತಿಯ ಮಡಿಲಲ್ಲಿ ಕುಳ್ಳಿರಿಸಿಕೊಂಡಿದ್ದಾರೆ. ಇದನ್ನು ನಾನು ಮತ್ತೆ ಮತ್ತೆ ಅನುಭವ ಮಾಡಿಕೊಳ್ಳುತ್ತೇನೆ. ಅವರ ಒಂದೆರಡು ಮಾತುಗಳನ್ನೇ ಹೇಳಿ ಈ ಲೇಖನವನ್ನು ಮುಗಿಸುತ್ತೇನೆ.

ಶ್ರೀಮಾತೆಯವರು ಹೆಚ್ಚು ನಿಯಮಗಳನ್ನೇನೂ ವಿಧಿ ಸುತ್ತಿರಲಿಲ್ಲ. ''ನೈವೇದ್ಯ ಮಾಡದ ಪದಾರ್ಥವನ್ನು ತಿನ್ನಬೇಡ; ಹಾಗೂ ಶ್ರಾದ್ಧದ ಊಟ ಮಾಡಬೇಡ'' ಎಂಬ ಎರಡು ಮಾತು ಗಳನ್ನು ಮಾತ್ರ ಹೇಳಿದ್ದರು. ನಾನು, ಅತ್ತಿಗೆ (ಪತಿಯ ಅಣ್ಣನ ಹೆಂಡತಿ) ಇಬ್ಬರೂ ಪ್ರಾಣವನ್ನೇ ಪಣವಾಗಿಡುವಂಥ ನಿಷ್ಠೆ ಯಿಂದ ಶ್ರೀಮಾತೆಯವರ ಮಾತುಗಳನ್ನು ಪಾಲಿಸಲು ಪ್ರಯತ್ನ ಪಡುತ್ತಿದ್ದೆವು. ನನ್ನ ತಂದೆಯವರ ಶ್ರಾದ್ಧದ ದಿನವೂ ಕೂಡ, ದಿನವಿಡೀ ಉಪವಾಸವಿದ್ದುಕೊಂಡು, ರಾತ್ರಿ ಮನೆಗೆ ಬಂದ ಮೇಲೆ ಊಟಮಾಡಿದ್ದೆ. ಜನರು ಏನೇನೋ ಮಾತುಗಳನ್ನು ಆಡಿಕೊಳ್ಳುತ್ತಿದ್ದರು. ಮುಂದೆ 'ಶ್ರೀ ಶ್ರೀ ಮಾಯೇರ್ ಕಥಾ' (ಕನ್ನಡದಲ್ಲಿ: 'ಶ್ರೀ ಶಾರದದೇವಿ ವಚನವೇದ') ಪ್ರಕಟವಾದಾಗ ಅದರಲ್ಲಿ ಶ್ರೀಮಾತೆಯವರು ಒಬ್ಬ ಭಕ್ತನಿಗೆ ಹೀಗೆ ಹೇಳಿದ್ದನ್ನು ಓದಿದೆ: ''ನೀವೆಲ್ಲ ಸಂಸಾರಸ್ಥರು. ನಿನ್ನ ಮನೆಯಲ್ಲೇ ಆದರೆ, ಇನ್ನೇನು ಮಾಡುವೆ? ಪ್ರಸಾದ ತೆಗೆದುಕೋ.'' ಆಗ ನಾವು ಮಾತನಾಡಿಕೊಳ್ಳುತ್ತಿದ್ದೆವು, ಶ್ರೀಮಾತೆಯವರು ನಮಗೆಲ್ಲರಿಗೂ ಒಂದೇ ರೀತಿಯಲ್ಲಿ ಹೇಳಿಲ್ಲ – ಎಂಬುದಾಗಿ.

ಶ್ರೀಮಾತೆಯವರು ತಮ್ಮ ಬಾಯಿಯಿಂದಲೇ ಹೇಳಿದ್ದರು, ''ಹೌದಮ್ಮಾ, ಆಶ್ರಯ ನೀಡಿದ್ದೇನಲ್ಲ?'' ಎಂದು. ನಾನು ಅಂತ ರಂಗದಲ್ಲಿ ಈ ಮಾತಿನ ಅರ್ಥವನ್ನು ಹಲವು ಬಾರಿ ಅನುಭವಿಸಿ ದ್ದೇನೆ. 'ಮಾಯೇರ್ ಕಥಾ' ಪುಸ್ತಕದಲ್ಲಿ ಓದಿದ ಹಾಗೆ, ಶ್ರೀಮಾತೆಯವರು ಹೇಗೆ ರಾಧುವನ್ನು ಅವಳ ಬಯಕೆಗಳಿಂದ ರಕ್ಷಿಸಿದ್ದರೋ, ಹಾಗೆಯೇ ನನ್ನನ್ನೂ ರಕ್ಷಿಸುತ್ತಿದ್ದಾರೆ. ರಾಮ ನಾಡಿನ ರಾಜನು ಬೊಕ್ಕಸವನ್ನೆಲ್ಲ ತೆರೆದಿಟ್ಟು, ಏನನ್ನಾದರೂ ಕೊಡಲು ಸಿದ್ಧನಾಗಿದ್ದರೂ ಕೂಡ, ರಾಧು ಒಂದು ಪೆನ್ಸಿಲನ್ನು ಹೊರತುಪಡಿಸಿ ಬೇರೆ ಏನನ್ನೂ ಹೇಗೆ ಬಯಸಲಿಲ್ಲವೊ, ಅದೇ ರೀತಿ (ಲಕ್ನೋದಲ್ಲಿ ವಾಸವಾಗಿದ್ದಾಗ) ನನ್ನ ಲಕ್ಷಾಧಿಪತಿ ತಂದೆ ನನ್ನನ್ನು ಒಮ್ಮೆ ಪೇಟೆಗೆ ಕರೆದುಕೊಂಡು ಹೋಗಿ ನನ್ನನ್ನು ಕೇಳಿ ದರು : ''ನಿನಗೆ ಏನು ಬೇಕೋ, ಕೊಂಡುಕೋ.'' ಆಗ ಮೂರು ನಾಲ್ಕು ಸಾವಿರ ರೂಪಾಯಿ ವಸ್ತುಗಳನ್ನಾದರೂ ನಾನು ಕೊಂಡು ಕೊಳ್ಳಬಹುದಾಗಿತ್ತು; ಏನೂ ತೊಂದರೆಯಿರುತ್ತಿರಲಿಲ್ಲ. ಆದರೆ ಆಗ ನೆನಪಾಯಿತು, ಶ್ರೀಮಾತೆಯವರು ಹೇಳಿದ್ದರು, ಆಸೆಗಳೇ ಇರಬಾರದು ಎಂದು. ನನ್ನ ಕಣ್ಣಮುಂದೆ ಮಾತೃ ಮೂರ್ತಿ ತೇಲಿ ಬಂದಂತಾಗಿ, ನಾನು ಹೇಳಿದೆ: ''ಅಪ್ಪಾ, ನನಗೆ ಏನೂ ಬೇಕಾ ಗಿಲ್ಲ. ಎಲ್ಲವೂ ಇದೆಯಲ್ಲ. ಸುಮ್ಮನೆ ಲಕ್ನೋದಿಂದ ಕಲ್ಕತ್ತೆಯ ವರೆಗೆ ಸಾಮಾನುಗಳ ಭಾರ ಹೆಚ್ಚಾಗುವುದು, ಅಷ್ಟೇ.'' ನಾನು ಎಂಥ ಸುಯೋಗವನ್ನು ಕಳೆದುಕೊಂಡೆ ಎಂದು ಮನೆಗೆ ಮರ ಳಿದ ಬಳಿಕ ಎಲ್ಲರಿಂದ ಬೈಸಿಕೊಂಡೆ. ಆದರೆ ನನ್ನ ಅಂತರಂಗದಲ್ಲಿ ಕುಳಿತು, ನಾನು ಏನನ್ನೂ ಕೊಂಡುಕೊಳ್ಳದ ಹಾಗೆ ಮಾಡಿದ್ದು ಯಾರು ಅಂತ ಅವರಿಗೆ ಗೊತ್ತಾಗಲಿಲ್ಲ! ನಾನು ಮೌನವಾಗಿ ಶ್ರೀಮಾತೆಯವರನ್ನೇ ನೆನೆಯುತ್ತಿದ್ದೆ.

ಶ್ರೀಮಾತೆಯವರ ಅಪಾರ ಕೃಪೆಯನ್ನು ನೆನೆಯುತ್ತ ಇನ್ನೊಂದು ಘಟನೆಯನ್ನು ಇಲ್ಲಿ ಹೇಳಿಬಿಡುತ್ತೇನೆ. ಶ್ರೀಮಾತೆ ಯವರು ನನ್ನ ಮೇಲೆ ಕೃಪೆಯನ್ನು ಬೀರಿ, ನನಗೆ ದೀಕ್ಷೆ ನೀಡಿ, ಆಶ್ರಯ ಕೊಟ್ಟಾಗಿನಿಂದ ನನಗೆ ಅನ್ನಿಸುತ್ತಿತ್ತು, ಯಾವಾಗ ಶ್ರೀಮಾತೆ ನನ್ನ ಮೇಲೆ ಕೃಪೆ ತೋರಿ ನನ್ನ ಪತಿಯವರ ಮನ ಸ್ಸನ್ನು ಈ ಮಾರ್ಗದಲ್ಲೇ ಕರೆತರುವರೋ ಅಂತ. ನಾನು ನಿಯತ ವಾಗಿ ಶ್ರೀಮಾತೆಯವರ ಬಳಿ ಇದನ್ನೇ ಪ್ರಾರ್ಥಿಸಿಕೊಳ್ಳುತ್ತಿದ್ದೆ. ನಮ್ಮ ಮನೆಯಲ್ಲಿ ಒಬ್ಬೊಬ್ಬರೇ ಆಗಿ ಪೂಜ್ಯ ಶರತ್ ಮಹಾ ರಾಜರ ಬಳಿ, ಅಥವಾ ಕೆಲವರು ಆಗಿನ ರಾಮಕೃಷ್ಣ ಮಠ–ಮಿಷನ್ನಿನ ಅಧ್ಯಕ್ಷರಾಗಿದ್ದ ಮಹಾಪುರುಷ ಮಹಾರಾಜರ (ಸ್ವಾಮಿ ಶಿವಾನಂದರು, ಶ್ರೀರಾಮಕೃಷ್ಣರ ನೇರ ಶಿಷ್ಯರು) ಬಳಿ ದೀಕ್ಷೆ ಪಡೆದುಕೊಳ್ಳುತ್ತಿದ್ದರು – ಇದರಿಂದಲೂ ನನ್ನ ಮನಸ್ಸಿನಲ್ಲಿ ಅಂತಹ ಆಲೋಚನೆ ಉಂಟಾಗುತ್ತಿತ್ತು. ಒಂದು ಸಲ ನನ್ನ ಒಬ್ಬ ಭಾವಮೈದುನ ಹಾಗೂ ಅವನ ಪತ್ನಿ ಮಹಾಪುರುಷ ಮಹಾ ರಾಜರ ಬಳಿ ದೀಕ್ಷೆ ಪಡೆದುಕೊಳ್ಳುವ ದಿನ ನಿಗದಿಯಾದಾಗ, ನನ್ನ ಪತಿ ಕೆಲಸದ ನಿಮಿತ್ತ ದೂರದ ವಿಲಾಸ್‌ಪುರದಲ್ಲಿ ಇದ್ದರು. ದೀಕ್ಷೆಗೆ ಹಿಂದಿನ ದಿನ ನನಗೆ ಒಂದೇ ಆಲೋಚನೆ – 'ಅಮ್ಮಾ, ಕರುಣಾಮಯಿ, ಕೃಪೆ ತೋರಿ ಅವರ ಮನಸ್ಸನ್ನು ಈ ಮಾರ್ಗ ದಲ್ಲಿ ಕರೆದುಕೊಂಡು ಬಾ' ಎಂದು. ಆಗ ಶ್ರೀಮಾತೆಯವರು ತಮ್ಮ ಇಹಲೀಲೆಯನ್ನು ಮುಗಿಸಿ ತುಂಬಾ ದಿನಗಳಾಗಿದ್ದವು. ಇದ್ದಕ್ಕಿದ್ದಂತೆ ಸಾಯಂಕಾಲದ ಹೊತ್ತು ನನ್ನ ಪತಿಯವರು ವಿಲಾಸ ಪುರದಿಂದ ಬಂದುಬಿಟ್ಟರು. ಮರುದಿನ ಅವರು ಎಂದಿನಂತೆ ಬೆಳಿಗ್ಗೆ ತಿಂಡಿ ಮುಗಿಸಿ, ನನ್ನ ಒತ್ತಾಯಕ್ಕೆ ತನ್ನ ತಮ್ಮ ಹಾಗೂ ಅವನ ಪತ್ನಿಯ ದೀಕ್ಷೆಯನ್ನು ನೋಡಲು ನಮ್ಮೊಡನೆ ಬೇಲೂರು ಮಠಕ್ಕೆ ಬಂದರು. ಅವರ ದೀಕ್ಷೆ ಮುಗಿದು, ಮರಳಿ ಹೋಗುವ ಸಮಯದಲ್ಲಿ ನಾನು ಕಾತರಭಾವದಿಂದ ನನ್ನ ಪ್ರಾರ್ಥನೆಯನ್ನು ಶ್ರೀಮಾತೆಯವರ ಬಳಿ ನಿವೇದಿಸಿಕೊಳ್ಳುತ್ತಿದ್ದೆ. ಅಷ್ಟರಲ್ಲಿ ನನ್ನ ಪತಿಯವರು ಇದ್ದಕ್ಕಿದ್ದಂತೆ ಬಂದು ತಿಳಿಸಿದರು, ಮಹಾಪುರುಷ್ ಮಹಾರಾಜರು ಅವರಿಗೂ ದೀಕ್ಷೆ ನೀಡಲು ಬಯಸಿದ್ದಾರೆ – ಎಂಬುದಾಗಿ. ಸ್ನಾನ ಮಾಡಿಲ್ಲ , ಅದೂ ಅಲ್ಲದೆ ತಿಂಡಿ ತಿಂದು ಬಂದಿದ್ದಾರೆ – ಅಂತ ಅವರು ಹಿಂದೆ ಮುಂದೆ ನೋಡುತ್ತಿದ್ದರು. ನಾನು ಕೂಡಲೇ ಹೇಳಿದೆ, ''ಅದು ಏನೇ ಇರಲಿ, ಕೃಪಾ

ಲಾಭವನ್ನು ಹೊಂದಲು ಕಾಲ-ಅಕಾಲ ಎಂದೇನಿಲ್ಲ. ಈಗಲೇ ದೀಕ್ಷೆ ಪಡೆದುಕೊಳ್ಳಿ.'' ಹೀಗೆ ಅವರು ಮಹಾಪುರುಷ್ ಮಹಾರಾಜರಿಂದ ದೀಕ್ಷೆ ಪಡೆದುಕೊಂಡು, ರಾತ್ರಿಯ ಗಾಡಿಯಲ್ಲೇ ತಾವು ಕೆಲಸ ಮಾಡುತ್ತಿದ್ದಲ್ಲಿಗೆ ಮರಳಿ ಹೋದರು. ನಾನು ವಿಸ್ಮಯದಿಂದ ಶ್ರೀಮಾತೆಯವರ ಅಪಾರ ಕೃಪೆಯನ್ನೇ ನೆನೆಯ ತೊಡಗಿದೆ.

ಈ ಘಟನೆ ನಡೆದು, ಕೆಲವು ದಿನಗಳ ನಂತರ ನಾವು ಇನ್ನೊಮ್ಮೆ ಬೇಲೂರು ಮಠಕ್ಕೆ ಹೋದೆವು. ನಾನಾ ಬಗೆಯ ಸಾಂಸಾರಿಕ ಜಂಜಾಟಗಳಿಂದಾಗಿ ನನ್ನ ಪತಿಯವರು ಅತ್ಯಂತ ವಿಚಲಿತರಾಗಿದ್ದರು. ನಾವು ಪ್ರಣಾಮ ಮಾಡಿ, ತಲೆಯೆತ್ತುವಷ್ಟರಲ್ಲಿ ಶಿವನೇ ಮೂರ್ತಿವೆತ್ತಂತಿದ್ದ ಮಹಾಪುರುಷ್ ಮಹಾರಾಜರು ಹೇಳತೊಡಗಿದರು: ''ನಿಮಗೇನು ಬೇಕು? ಹೇಳಿ, ಏನಾಗಬೇಕು?'' ಆಗ ಅವರು ವರ, ಅಭಯ ನೀಡುವ ಕರಗಳಿಂದ ಚತುರ್ವರ್ಗ(ಧರ್ಮ, ಅರ್ಥ, ಕಾಮ, ಮೋಕ್ಷ)ಗಳನ್ನೇ ನೀಡಲು ತಯಾರಾಗಿದ್ದಂತೆ ಕಂಡುಬಂದರು! ಶ್ರೀರಾಮಕೃಷ್ಣರು ಹೇಳುತ್ತಿದ್ದ, ''ರಾಜನನ್ನು ಭೇಟಿಯಾದಾಗ ನೀನು ಕುಂಬಳಕಾಯಿ ಬೇಡಿದರೆ ಏನು ಪ್ರಯೋಜನ?'' ಎಂಬ ಮಾತು ನನ್ನ ಮನಸ್ಸಿನಲ್ಲಿ ತೇಲಿಬಂತು. ಶ್ರೀಮಾತೆ 'ನಿರ್ವಾಸನಾ' (ಆಸೆ ಇಲ್ಲದಿರಬೇಕು) ಎಂದಿದ್ದರು. ಇನ್ನೂ ಮಹಾಪುರುಷ ಮಹಾರಾಜರು ಉತ್ತರವನ್ನು ನಿರೀಕ್ಷಿಸುತ್ತ ನನ್ನ ಮುಖವನ್ನೇ ನೋಡುತ್ತಿದ್ದರು. ''ಠಾಕೂರರ (ಶ್ರೀರಾಮಕೃಷ್ಣರ) ಪಾದಗಳಲ್ಲಿ ಪ್ರೇಮ, ಭಕ್ತಿ ಉಂಟಾಗುವಂತೆ ಮಾಡಿ ಮಹಾರಾಜ್, ಮತ್ತೇನೂ ಬೇಡ'' ಎಂದು ನನ್ನಿಂದ ಹೇಳಿಸಿದರು ಶ್ರೀಮಾತೆ. ಮಹಾರಾಜ್ ಅತ್ಯಂತ ಆನಂದಗೊಂಡು, ''ಆಗುವುದು, ಆಗುವುದು. ನಿಮಗೆ ಅದು ಆಗುವುದು!'' ಎಂದರು.

ಹೀಗೆ ಲಭಿಸಿದ ಸಾಕ್ಷಾತ್ ಶಿವನ ಕೃಪೆಯನ್ನು ಜೀರ್ಣಿಸಿಕೊಳ್ಳಲು ಶ್ರೀಮಾತೆಯವರ ಆಶ್ರಯವಿಲ್ಲದಿದ್ದರೆ ಸಾಧ್ಯವಾಗುತ್ತಿತ್ತೆ? 'ಆಶ್ರಯ ನೀಡಿದ್ದೇನೆ' ಎಂಬುದಾಗಿ ಶ್ರೀಮಾತೆಯವರೇ ತಮ್ಮ ಬಾಯಿಯಿಂದ ಆಡಿದ್ದರು. ಈ ರೀತಿ ಕಾಲಕಾಲಕ್ಕೆ ತಮ್ಮ ಮಗುವಾದ ನನ್ನನ್ನು ರಕ್ಷಿಸಿದ್ದಾರೆ. ಆ ಕ್ಷಣದಲ್ಲಿ ಒಂದಿಷ್ಟು ಜಾರಿಬಿದ್ದಿದ್ದರೂ, ಯಾವ ಬಗೆಯಲ್ಲಿ ಆಸೆಗಳ ಮಹಾಬಲೆಯಲ್ಲಿ ಸಿಕ್ಕಿಹಾಕಿಕೊಂಡುಬಿಡಬೇಕಾಗುತ್ತಿತ್ತೋ, ಯಾರು ಬಲ್ಲರು?

ಇನ್ನೊಂದು ಬಾರಿ ಪೂಜ್ಯ ಗಂಗಾಧರ ಮಹಾರಾಜ್( ಸ್ವಾಮಿ ಅಖಂಡಾನಂದರು, ಶ್ರೀರಾಮಕೃಷ್ಣರ ನೇರ ಶಿಷ್ಯರು) – ಆಗ ಅವರು ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಅಧ್ಯಕ್ಷರಾಗಿದ್ದರು – ಲಾಲ್‌ಗೋಲಾ (ಪಶ್ಚಿಮ ಬಂಗಾಳದ ಒಂದು ಪಟ್ಟಣ) ದಲ್ಲಿದ್ದ ನನ್ನ ಭಾವಮೈದುನನ ಮನೆಗೆ ಬಂದಿದ್ದರು. ೧೯೩೪ರ ಡಿಸೆಂಬರ್ ೩೧ರಂದು ಅವರು ಸಾರಗಾಛಿ ಆಶ್ರಮದಿಂದ ಬಂದು, ಅಂದು ರಾತ್ರಿ ನಮ್ಮೊಂದಿಗೆ ಉಳಿದುಕೊಂಡಿದ್ದರು. ಸ್ಥಳ ತುಂಬ ಚಿಕ್ಕದಾಗಿತ್ತು; ಮೂರೇ ಕೋಣೆಗಳಿದ್ದವು. ಪೂಜ್ಯ ಮಹಾರಾಜರು ಪಕ್ಕದ ಕೋಣೆಯಲ್ಲಿದ್ದರು; ನಡುವೆ ಬಾಗಿಲು – ಅಷ್ಟೇ. ಬೆಳಗಾಗುತ್ತಲೇ ಬಾಗಿಲು ತೆರೆದು, ಅವರಿಗೆ ಪ್ರಣಾಮ ಮಾಡುತ್ತಿದ್ದಂತೆಯೇ ಅವರು ಗುಟ್ಟಾಗಿ ಹೇಳಿದರು, ''ನಿಮ್ಮ ಮನೆಯಲ್ಲಿ ಒಂದು ವರ್ಷ ತಂಗಿದ್ದೇನೆ!'' ನಾನು ಆಶ್ಚರ್ಯಗೊಂಡು ಕೇಳಿದೆ,


ಸ್ವಾಮಿ ಅಖಂಡಾನಂದರು

''ಅದು ಹೇಗೆ ಮಹಾರಾಜ್?'' ಅವರು ನಗುತ್ತ ಹೇಳಿದರು, ''೩೪ನೇ ಇಸವಿಯಲ್ಲಿ ಬಂದೆ, ಇವತ್ತು ೩೫ ನೇ ಇಸವಿ. ಒಂದು ವರ್ಷವಾಗಲಿಲ್ಲವೆ?'' ನಾವೆಲ್ಲರೂ ಚೆನ್ನಾಗಿ ನಗತೊಡಗಿದೆವು.

ಮುಂಜಾನೆ ಅವರು ತೋಟದಲ್ಲಿ ಆರಾಮ ಕುರ್ಚಿಯಲ್ಲಿ ಶಿಶುಸಹಜವಾದ ಸ್ವಭಾವದಿಂದ, ಆನಂದದಿಂದ ನಮ್ಮೊಂದಿಗೆ ನಾನಾ ಬಗೆಯ ಕಥೆಗಳನ್ನು ಹೇಳುತ್ತಿದ್ದರು. ನಾವೂ ಅವರ ಮಗುವಿನಂತಹ ಸ್ವಭಾವವನ್ನು ಕಂಡು ಸಂಕೋಚವಿಲ್ಲದೆ ಅವರೊಂದಿಗೆ ಬೆರೆತೆವು. ಅವರ ಒಳ-ಹೊರಗೆ ಯಾವುದೇ ಅಡೆತಡೆಯಿರಲಿಲ್ಲ. ನಾನು ಅವರನ್ನು ಕೇಳಿಕೊಂಡೆ: ''ಮಹಾರಾಜ್, ಇಂದು ಜನವರಿ ೧ನೇ ದಿನಾಂಕ; ಇಂದು ಠಾಕೂರರು ಕಲ್ಪತರುವಾಗಿದ್ದರು. ನೀವು ಕೂಡ ನಮಗೆ ಕಲ್ಪತರುವಾಗಿ.'' ಕೂಡಲೇ ಅವರು ಬಾಲಕನ ಭಾವವನ್ನು ತೊರೆದು, ಗಂಭೀರ ಭಾವವನ್ನು ಹೊಂದಿ ಹೇಳಿದರು: ''ಹೇಳಿ, ನಿಮಗೆ ಏನು ಬೇಕು?'' ಕರುಣಾಮಯಿ ಶ್ರೀಮಾತೆಯವರ ಪುಣ್ಯನುಡಿಗಳು ನನ್ನ ಮನಸ್ಸಿನಲ್ಲಿ ''ನಿರ್ವಾಸನಾ, ನಿರ್ವಾಸನಾ'' ಎಂದು ಏಳತೊಡಗಿದವು. ಶ್ರೀಮಾತೆಯವರು ನನ್ನ ಮೂಲಕ ಹೇಳಿಸಿದರು – ''ಮಹಾರಾಜ್, ಇನ್ನೇನೂ ಬೇಡ. ನಾನು ಬಿಸಿ ಬಿಸಿಯಾಗಿ ಅಡುಗೆ ತಯಾರು ಮಾಡಿಕೊಡುತ್ತೇನೆ. ನೀವು ನಮ್ಮೊಂದಿಗೆ ಕುಳಿತು ಊಟ ಮಾಡಬೇಕು.'' ಮಹಾರಾಜರ ಸ್ವರೂಪವೇ ಬದಲಾದಂತೆ ಅವರು ಹೇಳಿದರು, ''ಒಳ್ಳೆಯದು, ಹಾಗೇ ಆಗಲಿ. ನೀನು ಏನು ಬಡಿಸುತ್ತೀಯೋ, ಅದನ್ನೇ ಊಟ ಮಾಡುತ್ತೇನೆ.'' ಆನಂದದಿಂದ ನಾನು ಮೈಮರೆತೆ. ಶ್ರೀಮಾತೆ ನನ್ನನ್ನು ರಕ್ಷಿಸಿದರು. ಪೂಜ್ಯ ಗಂಗಾಧರ ಮಹಾರಾಜ್ ತಮ್ಮ ಮಗುವಿನಂತಹ ಸ್ವಭಾವದೊಂದಿಗೆ, ನಮ್ಮೊಂದಿಗೆ ಕುಳಿತು ಬಿಸಿ ಬಿಸಿಯಾದ ಊಟ ಮಾಡಿದರು. ನಮ್ಮ ಆಂತರ್ಯದ ಸೇವೆಯನ್ನು ಸ್ವೀಕರಿಸಿ, ನಮ್ಮನ್ನು ಧನ್ಯರನ್ನಾಗಿಸಿದರು.

*(ಮುಗಿಯಿತು)*